1419 (1442) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಉಪ ನೋಂದಣಿ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ,

ಆ) ಇವುಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು,

ಇ) ಬೆಂಗಳೂರು ನಗರದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಉಪ ನೋಂದಣಿ ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಂಡಿದೆ,

ಈ) ರಾಜ್ಯಾದ್ಯಂತ ಎಷ್ಟು ಉಪ ನೋಂದಣಿ ಕಛೇರಿಗಳನ್ನು ತೆರೆಯಲು ಸರ್ಕಾರ ಕ್ರಮ ಕೈಗೊಂಡಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಒಟ್ಟು 203 ಉಪ ನೋಂದಣಿ ಕಛೇರಿಗಳು

ಆ) 1) 203 ಉಪ ನೋಂದಣಿ ಕಛೇರಿಗಳಿಂದ 2005–06 ನೇ ಸಾಲಿನಲ್ಲಿ ರೂ 2,385 29 ಕೋಟಿ

2) 2006–07 ನೇ ಸಾಲಿನಲ್ಲಿ ಫೆಬ್ರುವರಿ 2007 ಅಂತ್ಯದವರೆಗೆ ಒಟ್ಟು ರೂ 3,046,84 ಕೋಟಿ ಆದಾಯ ಬಂದಿರುತ್ತದೆ

ಇ) ದಿನಾಂಕ 18–01–2007 ರ ಸ ಅ ಸಂಖ್ಯೆ ಕಂ ಇ 25 ಮುನೊಸ 2005 ರಲ್ಲಿ ಬೆಂಗಳೂರು ನಗರದಲ್ಲಿರುವ 6 ಉಪನೋಂದಣಿ ಕಛೇರಿಗಳನ್ನು 27 ಉಪ ನೋಂದಣಿ ಕಛೇರಿಗಳನ್ನಾಗಿ ವಿಭಜಿಸಿ ಆದೇಶಿಸಿದ ವಿವರಗಳನ್ನು ಅನುಬಂಧದಲ್ಲಿರಿಸಲಾಗಿದೆ

ಈ) ಪ್ರಶ್ನೆ 'ಇ' ಯಲ್ಲಿ ವಿವರಿಸಿರುವ ಹೊಸ ಉಪ ನೋಂದಣಿ ಕಛೇರಿಗಳನ್ನು ವಿಭಜಿಸಿರುವುದನ್ನು ಹೊರತುಪಡಿಸಿ ರಾಜ್ಯದಲ್ಲಿ ಇನ್ನಾವುದೇ ಸ್ಥಳಗಳಲ್ಲಿ ಹೊಸ ಉಪನೋಂದಣಿ ಕಛೇರಿಗಳನ್ನು ತೆರೆಯುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ

Sl.No	Sub-District
1	Sub-Registrar's Office, Kacharakanahalli, HQ Kacharakanahalli
2	Sub-Registrar's Office, Hebbal, HQ Hebbal
3	Sub-Registrar's Office, Peenya, HQ Peenya
4	Sub-Registrar's Office, Laggere, HQ Laggere
5	Sub-Registrar's Office, Nagarbhavi, HQ Nagarbhavi
6	Sub-Registrar's Office, Madanayakanahalli, HQ Madanayakanalli
7	Sub-Registrar's Office, Dasanapura, HQ Dasanapura
8	Sub-Registrar's Office, Varthur Hobli, HQ Varthur
9	Sub-Registrar's Office, Begur, North of Housur Road, HQ Begur
10	Sub-Registrar's Office, Bommanahalli (Bommanahalli CMC limits), HQ Bommanahalli
11	Sub-Registrar's Office,Kengeri, HQ Kengeri

12	Sub-Registrar's Office, Kengeri - 2 as SRO Rajarajeshwari Nagara (Covering CMC area surrounding villages), HQ Rajarajeshwari Nagar
13	Sub-Registrar's Office,Uttarahalli - 1 as SRO, JP Nagara, HQ JP Nagar
14	Sub-Registrar's Office, Uttarahalli-2 as SRO Banashankari, HQ Banashankari
15	Sub-Registrar's Office, Tavarekere, HQ Tavarekere
16	Sub-Registrar's Office, Mahadevapura (Mahadevapura CMC Limits) HQ White Field
17	Sub-Registrar's Office, Bidarahalli, HQ Avalahalli
18	Sub-Registrar's Office, K R Puram (K R Puram CMC Limits), HQ K R Puram
19	Sub-Registrar's Office, Banaswadi, HQ Banaswadi
20	Sub-Registrar's Office, Yelahanka (Yelahanka CMC Limits) HQ Yelahanka
21	Sub-Registrar's Office, Yelahanka Rural (including Byatarayanapura CMC Limits)

	HQ Byatarayanapura
22	Sub-Registrar's Office, Hesaraghatta, HQ Hesaraghatta
23	Sub-Registrar's Office, Jala HQ Jala
24	Sub-Registrar's Office, Anekal, HQ Anekal
25	Sub-Registrar's Office, Sarjapura, HQ Sarjapura
26	Sub-Registrar's Office, Attibele, HQ Chandapur
27	Sub-Registrar's Office, Jigani, HQ Bannerghatta

1420 (2053) ಶ್ರೀ ವಿಶ್ವನಾಥ ಹೆಚ್ ಎಂ (ಸಕಲೇಶಪುರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ ಟಿ ಸಿಯಲ್ಲಿ ಕಲಂ ಸಂಖ್ಯೆ 8 ಮತ್ತು 9 ರಲ್ಲಿ ಸರ್ವೆ ನಂ ಮತ್ತು ಎಂ ಆರ್ ಸಂಖ್ಯೆ ಕಂಪ್ಯೂಟರ್‌ನಲ್ಲಿ ತಪ್ಪಾಗಿ ನಮೂದಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ ಸದರಿ ತಪ್ಪುಗಳನ್ನು ಅರ್ಜಿದಾರರು ಕೋರಿದ್ದಾಗ ತಿದ್ದು ಕೊಡಲಾಗುತ್ತಿದೆಯೇ,

ಇ) ಹಾಗಿದ್ದಲ್ಲಿ ಆಲೂರು, ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಇಂತಹ ಪ್ರಕರಣಗಳನ್ನು ತಿದ್ದು ಪಡಿ ಮಾಡಿಕೊಡಲಾಗಿದೆ ಹಾಗೂ ಎಷ್ಟು ಬಾಕಿ ಇದೆ (ಸಕಲೇಶಪುರ ಮತ್ತು ಆಲೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಗ್ರಾಮವಾರು ವಿವರ ನೀಡುವುದು),